**O.S. 242-24 PW : 2**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 14.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ G N B, ವಕೀಲರಿಂದಃ**

2. ಎರಡನೇ ಪ್ರತಿವಾದಿ ನನ್ನ ಅಣ್ಣ ವೀರಪ್ಪನ ಹೆಂಡತಿ. ಎರಡನೇ ಪ್ರತಿವಾದಿ ನಮ್ಮ ಮನೆಯಲ್ಲಿ 10 ವರ್ಷಗಳ ಕಾಲ ಜೀವನ ಮಾಡಿದ್ದಾರೆ. ನನ್ನ ಅಣ್ಣ ವೀರಪ್ಪ ದಿಃ 6.3.2024 ರಂದು ಮರಣ ಹೊಂದಿದ್ದಾನೆ. ನನ್ನ ಅಣ್ಣ ಮರಣ ಹೊಂದುವವರೆಗೂ ಎರಡನೇ ಪ್ರತಿವಾದಿ ನಮ್ಮ ಅಣ್ಣನ ಮನೆಯಲ್ಲಿದ್ದಳು ಅಂದರೆ ಸರಿ. ಅವರಿಬ್ಬರಿಗೂ ಮಕ್ಕಳಾಗಿರಲಿಲ್ಲ. ನಮ್ಮ ಅಣ್ಣನಿಗೆ 2 ನೇ ಪ್ರತಿವಾದಿ ಒಬ್ಬರೇ ವಾರಸುದಾರರು ಅಂದರೆ ಸರಿ. ಪಹಣಿ ಪತ್ರಿಕೆಗಳು ನನ್ನ ಹಾಗೂ ನನ್ನ ಅಣ್ಣನ ಹೆಸರಿನಲ್ಲಿ ಬೇರೆ ಬೇರೆ ಇವೆ ಅಂದರೆ ಸರಿಯಲ್ಲ. ನಿಪಿ.1 ಹಾಗೂ 2 ಪಹಣಿ ಪತ್ರಿಕೆಗಳು ನಮ್ಮ ಆಸ್ತಿಗೆ ಸಂಬಂಧಪಟ್ಟಿವೆ ಎಂದು ಸ್ವತಃ ಹೇಳುತ್ತಾರೆ. ನಿಪಿ.1 ಸ ನಂಃ 561 ರ 4 ಎಕರೆ 5 ಗುಂಟೆ ನನ್ನ ಸಹೋದರ ವೀರಪ್ಪನ ಹೆಸರಿನಲ್ಲಿದೆ ಅಂದರೆ ಸರಿ. ನಿಪಿ.2 ರ 562/1 ರ 4 ಎಕರೆ ಜಮೀನು ನನ್ನ ಹೆಸರಿನಲ್ಲಿದೆ ಅಂದರೆ ಸರಿ. ಸುಮಾರು 10 ವರ್ಷಗಳ ಹಿಂದೆ ವಾಟ್ನಿಯಾಗಿದೆ ಅಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ, 1980-83 ರಲ್ಲಿ ಆಪಸಾತ ವಾಟ್ನಿಯಾಗಿದೆ ಎಂದು ಹೇಳುತ್ತಾರೆ. ನನ್ನ ತಂದೆ ಅಣ್ಣ ತಮ್ಮಂದಿರ ನಡುವೆ 1980-83 ರಲ್ಲಿ ಆಪಸಾತ ದಲ್ಲಿ ವಾಟ್ನಿಯಾಗಿದೆ. ನನ್ನ ಹಾಗೂ ನನ್ನ ಅಣ್ಣನ ಹೆಸರಿನಲ್ಲಿ ಪಣಹಿ ಪತ್ರಿಕೆಗಳು ಯಾವಾಗ ಆಗಿವೆ ಎಂದು ಗೊತ್ತಿಲ್ಲ. ನಮ್ಮ ಅಣ್ಣ ಮರಣ ಹೊಂದಿದ ನಂತರ ಪಹಣಿ ಪತ್ರಿಕೆ ತೆಗೆಸಿದ ನಂತರ ಗೊತ್ತಾಗಿವೆ. ನನ್ನ ಹಾಗೂ ನನ್ನ ಅಣ್ಣನ ನಡುವೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ವಾಟ್ನಿಯಾಗಿದೆ ಅಂದರೆ ಸರಿಯಲ್ಲ. ಶಿರಗುಪ್ಪಿ ಗ್ರಾಮದಲ್ಲಿರುವ ವಿ ಪಿ ಸಿ ನಂಃ 200/ಎ ರ ಶಿವಪ್ಪರವರ ವಾರಸುದಾರರಿಂದ ಖರೀದಿ ಮಾಡಿದ ಬಗ್ಗೆ ಖರೀದಿ ಪತ್ರ ಹಾಜರಪಡಿಸಿಲ್ಲ. ದಿಃ 27.5.1983 ರಂದು ಕಮಲವ್ವ ಈರಪ್ಪ ಇಂದಿರಾ, ಶೈಲಾ ಹಾಗೂ ಬಸವರಾಜ ಇವರಿಂದ ಖರೀದಿ ಮಾಡಿದ ಖರೀದಿ ಪತ್ರ ಹಾಜರಪಡಿಸಿಲ್ಲ. ಮನೆ ಜಾಗವನ್ನು ನಮ್ಮ ತಂದೆ ಹಂಚಿಕೆ ಮಾಡಿಕೊಟ್ಟಿಲ್ಲ ಅಂದರೆ ಸರಿ. ಮನೆ ಒಂದೆ ಏಕತ್ರ ಘರಾಣಾದ ಆಸ್ತಿ ಅಂದರೆ ಸರಿಯಲ್ಲ. 3 ಜನರ ಪಿತ್ರಾರ್ಜಿತ ಆಸ್ತಿ ಇರುತ್ತದೆ. ಎರಡನೇ ಪ್ರತಿವಾದಿ ನಮ್ಮ ಅಣ್ಣ ಮರಣ ಹೊಂದಿದ ನಂತರ ವಾರಸುದಾರಳಾಗಿ ಮನೆ ಜಾಗಕ್ಕೆ ಹಕ್ಕುದಾರಳು ಅಂದರೆ ಸರಿಯಲ್ಲ. ಆಕೆ ಎರಡನೇ ಹೆಂಡತಿ ಇರುತ್ತಾಳೆ. ಎರಡನೇ ಹೆಂಡತಿ ಎಂದು ಪ್ರತಿವಾದ ಪತ್ರದಲ್ಲಿ ಬರೆಸಿಲ್ಲ ಅಂದರೆ ಸರಿ.

**O.S. 242-24** **PW : 2**

ನಮ್ಮ ಅಣ್ಣನಿಗೆ ಎರಡನೇ ಪ್ರತಿವಾದಿ ಮೊದಲನೇ ಹೆಂಡತಿ ಅಂದರೆ ಸರಿಯಲ್ಲ. ನಮ್ಮ ಅಣ್ಣ ಮರಣ ಹೊಂದಿದ ನಂತರ ಎರಡನೇ ಪ್ರತಿವಾದಿ ದಿಃ 8.11.2024 ರಂದು ಮಂಜುನಾಥ ಲಕ್ಕಪ್ಪನವರ ಅಲಿಯಾಸ ಹಿತ್ತಲಮನಿ ಇವರೊಂದಿಗೆ ಮದುವೆಯಾಗಿ ಹೋಗಿದ್ದಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಪಾಲು ಕೊಡಬಾರದೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 2 ನೇ ಪ್ರತಿವಾದಿ ನನ್ನ ಅಣ್ಣನ ಕಾನೂನು ಬದ್ಧ ಹೆಂಡತಿ ಇರುವುದರಿಂದ ಹಕ್ಕುದಾರಳು ಅಂದರೆ ಸರಿಯಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ 1 ಇದು ವಾರಸಾನಾತೆಯಿಂದ 2 ನೇ ಪ್ರತಿವಾದಿ ಮಾತ್ರ ಹಕ್ಕುದಾರಳು ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

(ಯಮನಪ್ಪ ಕರೆಹನುಮಂತಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.